10.	250	125	300	150
11.	275	150	325	175
12.	275	150	325	175
13.	300	150	350	175
14.	300	150	350	175
15.	325	175	375	200
16.	325	175	400	200

ಸಹಕಾರ ಸಂಘಗಳ ನಿಬಂಧಕರ ಕಛೇರಿ

138 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿ ರಾಜ್ಯ ಮಟ್ಟದ ಸಹಕಾರ ಸಂಘಗಳ ಅಂದರೆ, ಅಪೆಕ್ಸ್ ಬ್ಯಾಂಕ್, ಕರ್ನಾಟಕ ಕೈಗಾರಿಕಾ ಸಹಕಾರ ಬ್ಯಾಂಕ್, ಕರ್ನಾಟಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಇತರೆ ಇವುಗಳಿಗೆ ಸಂಬಂಧಿಸಿದ ಬಾಕಿಯಿರುವ ಅವಾರ್ಡ್‌ಗಳು ಎಷ್ಟು? ಹಾಗೂ ಯಾವ ದಿನಾಂಕದಿಂದ ಬಾಕಿಯಿವೆ?*

ಆ) *ಈ ತರಹದ ಬಾಕಿಗೆ ಕಾರಣಗೂ ಮತ್ತು ಇದನ್ನು ತ್ವರಿತಗೊಳಿಸುವುದಕ್ಕೆ ತೆಗೆದುಕೊಂಡಿರುವ ಕ್ರಮಗಳು?*

ಇ) *ಅವಾರ್ಡುಗೊಳಿಗೋಸ್ಕರವಾಗಿಯೇ ಸಾಲುಗಾರರಿಂದ ವಸೂಲಿಯೂ ವಿಳಂಬವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ನಿಬಂಧಕರ ಕಛೇರಿಯಲ್ಲಿ ಅವಾರ್ಡ್‌ಗಳು ಬಾಕಿ ಇರುವುದಿಲ್ಲ. ಪ್ರಕರಣಗಳಲ್ಲಿ ಅವಾರ್ಡ್‌ಗಳಾದ ನಂತರ ಸಂಬಂಧಪಟ್ಟವರು ಅವುಗಳನ್ನು ಕರೆದುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ.

ರಾಜ್ಯ ಮಟ್ಟದ ಸಹಕಾರ ಸಂಘಗಳ ವಿವಾದ ಪ್ರಕರಣಗಳ ಇತ್ಯರ್ಥವಾಗಬೇಕಾಗಿರುವ ವಿವರಗಳು

ಕ್ರಮ ಸಂಖ್ಯೆ	ಸಹಕಾರ ಸಂಘದ ಹೆಸರು	ಇತ್ಯರ್ಥವಾಗಬೇಕಾಗಿರುವ ದಾವಾ ಪ್ರಕರಣಗಳು			
		1 ವರ್ಷ ದೊಳಗಿನ ಪ್ರಕರಣಗಳು	2 ವರ್ಷ ದೊಳಗಿನವು	2 ವರ್ಷ ಮೇಲ್ಪಟ್ಟ	ಮೊತ್ತ
1)	ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ಬೆಂಗಳೂರು	32	107	114	253

2)	ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕ್, ಬೆಂಗಳೂರು	120	233	334	687
3)	ಭಾರತ ಸಹಕಾರ ಬ್ಯಾಂಕ್ ನಿ	100	50	26	176
4)	ರೆಡ್ಡಿ ಸಹಕಾರ ಬ್ಯಾಂಕ್ ನಿ	270	95	30	395
5)	ಅಮಾನತ್ ಸಹಕಾರ ಬ್ಯಾಂಕ್	32	36	20	88
6)	ಸಿಲ್ಕ್ ಮಾರ್ಕೆಟಿಂಗ್ ಮಹಾಮಂಡಳಿ	-	-	9	9
7)	ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘ	-	23	3	26
8)	ಸಿಲ್ಕ್ ಹ್ಯಾಂಡ್‌ಲೂಂ ವೀವರ್ಸ್ ಸಹಕಾರ ಸಂಘ	-	-	12	12
9)	ಅಂಚೆ ನೌಕರರ ಆಪತ್ತಿನ ಸಹಕಾರ ಸಂಘ (ನಿ)	3	-	5	8
10)	ಕಂಟ್ರೋಲರ್ಸ್ ಸಹಕಾರ ಬ್ಯಾಂಕ್	2	-	3	5
11)	ಕರ್ನಾಟಕ ಸಹಕಾರ ಗ್ರಾಹಕರ ಮಹಾ ಮಂಡಳ (ನಿ) ಬೆಂಗಳೂರು	-	-	-	2
12)	ಕೆಎಂಎಫ್, ಬೆಂಗಳೂರು	10	1	-	11
13)	ಎಜುಕೇಶನ್ ಸಹಕಾರ ಸಂಘ	9	-	-	9
14)	ನರ್ಸರಿಮೆನ್ ಸಹಕಾರ ಸಂಘ	1	-	-	1
15)	ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಅಭಿವೃದ್ಧಿ				

	ಬ್ಯಾಂಕ್, ಬೆಂಗಳೂರು	1	-	-	1
16)	ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳ (ನಿ) ಬೆಂಗಳೂರು	3	4	22	29
	ಒಟ್ಟು	583	551	578	1,712

ಆ)1)ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಕಲಂ 70ರಡಿಯಲ್ಲಿ ಮಾಡಿರುವ ವಿವಾದಗಳು ನ್ಯಾಯಕ ಸ್ವರೂಪವಾಗಿದ್ದು, ಇವುಗಳನ್ನು ತೀರ್ಮಾನಿಸುವಲ್ಲಿ ಕಾನೂನಿನ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

2) ವಿವಾದ ಮಾಡುವಲ್ಲಿ ಕೆಲವು ಸಂಸ್ಥೆಗಳು ಅವಧಿ ಮೀರಿ ಹೂಡುತ್ತಿದ್ದು, ವಿಳಂಬ ವಿನಾಯಿತಿ ಅರ್ಜಿಗಳನ್ನು ಇತ್ಯರ್ಥ ಮಾಡಿದ ನಂತರ ವಿವಾದಗಳ ವಿಚಾರಣೆಯನ್ನು ಮುಂದುವರಿಸಬೇಕಾಗುತ್ತದೆ.

3) ವಿವಾದ ಅರ್ಜಿ ಜೊತೆಯಲ್ಲಿ ಮೂಲ ದಾಖಲಾತಿಗಳನ್ನಾಗಲೀ ಅಥವಾ ದೃಢೀಕರಿಸಿದ ದಾಖಲೆಗಳನ್ನಾಗಲಿ ಸಲ್ಲಿಸದೇ ಇರುವುದು.

4) ವಾದಿಗಳು ಮತ್ತು ಪ್ರತಿವಾದಿಗಳು ಗೈರು ಹಾಜರಿ ಆಗುವುದು.

5) ವಿಚಾರಣೆಯು ನಡೆಯುವಾಗ ಉಭಯ ಪಕ್ಷಗಾರರು ಸಲ್ಲಿಸುವ ಮಧ್ಯಂತರ ಅರ್ಜಿಗಳನ್ನು ಇತ್ಯರ್ಥ ಮಾಡುವುದು.

6) ವಿವಾದದ ಪ್ರಕರಣಗಳು ನ್ಯಾಯಾಂಗದ ಸ್ವರೂಪವಾಗಿದ್ದು ವಿವಾದ ಇತ್ಯರ್ಥವು ವಿವಾದದಲ್ಲಿ ನವಿಷಯಗಳನ್ನು ಅವಲಂಬಿಸಿರುತ್ತದೆ. ಆದ್ದರಿಂದ ವಿವಾದಗಳನ್ನು ಇತ್ಯರ್ಥಪಡಿಸಲು ಅವಧಿಯನ್ನು ನಿಗಧಿಪಡಿಸುವುದು ಸಾಧುವಲ್ಲ, ಆದರೂ ಶೀಘ್ರ ಇತ್ಯರ್ಥಕ್ಕಾಗಿ ಸಂಬಂಧಪಟ್ಟವರನ್ನು ವಿನಂತಿಸಲಾಗಿದೆ.

ಇ) ಹೌದು.

ಮೈಸೂರು ಬಸ್ ಸ್ಟ್ಯಾಂಡಿನ ಕ್ಯಾಂಟೀನ್ ಕುರಿತು

458 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಬಸ್ ಸ್ಟ್ಯಾಂಡಿನ ಕೆ.ಎಸ್.ಆರ್.ಟಿ.ಸಿ. ಕ್ಯಾಂಟೀನ್‌ಗೆ ಟೆಂಡರ್ ಕರೆಯಲಾಗಿದೆಯೇ?

ಆ) ಇದರಲ್ಲಿ ಇಲಾಖಾ ಅಧಿಕಾರಿಗಳು ಶಾಮಿಲಾಗಿದ್ದಾರೆಯೇ ಎಂಬ ಬಗ್ಗೆ ಯಾರು ಸರ್ಕಾರಕ್ಕೆವರಿಗೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈ ಗೊಂಡಿರುವ ಕ್ರಮವೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ